ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಬೆಟ್ಟದ ಮೇಲೆ ಕೆಂಪಕ್ಕಿ ಹುಡುಕಲು ಹೋಗಿ

ಸಣ್ಣ ಪಕ್ಷಿಗಳು ಆಳ ನೀರೆಂದರೆ ಸ್ನಾನ ಮಾಡಲು ಹೆದರುತ್ತವೆ. ಅವುಗಳಿಗೆ ದೇಹ ಮುಳುಗದ, ತಳ ಸ್ಪಷ್ಟವಾಗಿ ಕಾಣುವ ಸುರಕ್ಷಿತ ಜಾಗವೇ ಆಗಬೇಕು. ನೀರಿನ ನಡುವೆ ಕಲ್ಲುಗಳಿದ್ದರೆ ಜಳಕ ಮುಗಿಸಿ ಅದರ ಮೇಲೆ ಕೂರಲು ಅನುಕೂಲ. ಸುತ್ತಮುತ್ತ ಒಮ್ಮೆ ತಿರುಗಿ ನೋಡಿ ನೀರಲ್ಲಿ ಇಳಿಯುತ್ತವೆ. ಕತ್ತು ಮುಳುಗಿಸಿ ಪಟಪಟನೆ ರೆಕ್ಕೆ ಬಡಿಯುತ್ತವೆ.

‘ಇವತ್ತು ನೀವು ಹತ್ತುವ ಚಾಂಗ್ ಥಾಂಗ್ ಪರ್ವತ ಸ್ವಲ್ಪ ಜಾರಬಹುದು. ನೆನ್ನೆ ರಾತ್ರಿ ಅಲ್ಲಿ ಮಳೆ ಸುರಿದಿದೆ ಎಂದು ಅರುಣಿಮಾ ಆಂಟಿ ಹೇಳಿದರು. ನೀವು ಅವಸರ ಮಾಡದೆ ನಡೀಬೇಕು. ಕಾಡು ಹಾದಿಯಲ್ಲಿರುವ ಇಂಬಳಗಳು ಇನ್ನೂ ಹೀಚು ಮರಿಗಳಂತೆ. ಅವೇನು ಹೆಚ್ಚು ರಕ್ತ ಸೀಪಲಾರವು. ಹೋದ ಮೇಲೆ ಅದರಾಟ ಹೇಗಿದೆಯೋ ಹಾಗೆ. ನಿಮಗೆ ಅಭ್ಯಾಸ ಇದೆಯಲ್ಲ ಬಿಡಿ’ ಎಂದು ನ್ಯಾಚುರಲಿಸ್ಟ್ ತಣ್ಣಗೆ ಹೇಳಿದ. ರುಧಿರ ಸೆಳೆಯುವ ಜೀವಿಗಳ ಹೆಸರೆತ್ತಿ ನಮಗೆ ಇವನು ಹೆದರಿಸುತ್ತಿದ್ದಾನೋ? ಕಿಚಾಯಿಸುತ್ತಿದ್ದಾನೋ? ಇಲ್ಲ ಸಂತೈಸುತ್ತಿದ್ದಾನೋ? ಗೊತ್ತಾಗಲಿಲ್ಲ. ಕಾಡಿನ ಮಡಿಲಿಗೆ ಬಿದ್ದ ಮೇಲೆ ಇಂಬಳಗಳ ಕಾಟ ಸಾಮಾನ್ಯ. ಆದರೂ ಸಾಧ್ಯವಾದಷ್ಟು ಅವು ನಮಗೆ ಸಿಗದಿರಲಿ ದೇವರೇ ಎಂದು ಪಟಗಾರರು ಬೇಡಿಕೊಳ್ಳುತ್ತೇವೆ. ಮುಳುಮುಳು ಹತ್ತಿ, ತಂಪಾಗಿ ಕಡಿದು, ರಕ್ತಪಾತ ನಡೆಸುವ ರೌಡಿ ಲೀಚುಗಳನ್ನು ಕಂಡರೆ ಅದೇನೋ ಪುಕ್ಕಲು. ಹುಡುಕಿ ಕಿತ್ತೆಯೆಸಲೂ ಆಗದಂತಹ ಕ್ಲಿಷ್ಟ ಜಾಗೆಗಳ ತಲುಪಿ, ತಿಂಗಳ ತುರಿಕೆ ಕಾಯಂಗೊಳಿಸುವ ಇಂಬಳಗಳೆಂದರೆ ಹುಲಿ, ಚಿರತೆಗಳಿಗಿಂತಲೂ ಹೆಚ್ಚು ಭಯ-ಭಕ್ತಿ.

‘ನಿಮ್ಮ ಅದೃಷ್ಟ ಚೆನ್ನಾಗಿದ್ದು ಮಳೆ ನಿಂತು ಕೊಂಚ ಬಿಸಿಲು ಚೆಲ್ಲಾಡಿದರೆ ಬಣ್ಣದ ಪಕ್ಷಿಗಳನ್ನು ನೋಡಲು ಸಾಧ್ಯವಿದೆ. ಇಷ್ಟೊಂದು ರಿಸ್ಕ್ ತೊಗೊಂಡು ಚಾಂಗ್ ಥಾಂಗ್ ಪರ್ವತದ ತುದಿಗೆ ಬರುವ ಪಟಗಾರರು ಕಮ್ಮಿ. ಯಾರೋ ನಿಮ್ಮಂತಹ ಹುಚ್ಚು ಸಾಹಸಿಗರು ಮಾತ್ರ ಇಲ್ಲಿಗೆ ಬರುವುದು. ಅಂದಹಾಗೆ ಪರ್ವತದ ಬುಡದಲ್ಲಿ ನೈತಾನ್ ಎಂಬ ಸಣ್ಣ ಹಳ್ಳಿ ಸಿಗುತ್ತೆ ಸರ್, ಅದೇ ಕೊನೆ. ಅಲ್ಲಿ ಕಾರು ನಿಲ್ಲಿಸುತ್ತೇನೆ. ಅಲ್ಲಿಂದ ಮುಂದೆ ಕಾಲು ನಡಿಗೆ ಪಯಣ’ ಎಂದ.

ಸಿಕ್ಕಿಂ ರಾಜ್ಯದ ಗುಡ್ಡಬೆಟ್ಟಗಳ ಹರುಕು ಮುರುಕು ದಾರಿಯಲ್ಲಿ ನಮ್ಮ ಕಾರು ತಕಪಕ ಕುಣಿಯುತ್ತಿತ್ತು. ಒಂದು ಬೆಟ್ಟ ಏರಿ ಮುಗಿಸಿದರೆ ಮತ್ತೊಂದು ಪರ್ವತ ಹಸಿದ ಹೊಟ್ಟೆ ತೋರಿಸಿದರೆ ಮಸೆದ ಕತ್ತಿ ತೋರಿದರು ಎನ್ನುವಂತೆ ಧುತ್ತನೆ ಪ್ರತ್ಯಕ್ಷವಾಗುತ್ತಿತ್ತು. ಇಲ್ಲಿ ಹತ್ತಿರದ ಊರುಗಳಿಗೆ ತಲುಪಲೂ ಗಂಟೆಗಟ್ಟಲೆ ಕುಂಟು ಪಯಣ ಮಾಡಬೇಕಿತ್ತು. ಪ್ರತಿ ಮನೆಗಳ ಅಂಗಳದಲ್ಲಿ ಕಣ್ಣು ತಣಿಸುವ ಗಾಢ ಬಣ್ಣದ ಹೂವು